# ನಿಮ್ಮೊಡನೆ

## ನ್ಯಾಯ ವಿಳಂಬ: ನ್ಯಾಯಾಂಗವೊಂದೇ ಕಾರಣವಲ್ಲ

> ಸರ್ಕಾರಗಳು ದಾಖಲು ಮಾಡಿರುವ ಪ್ರಕರಣಗಳಲ್ಲಿ ಶೇ. 40ರಷ್ಟು ಪ್ರಕರಣಗಳು ಹುರುಳಿಲ್ಲದವು ಎಂದು ಸುಪ್ರೀಂ ಕೋರ್ಟ್ ಈಚೆಗೆ ಹೇಳಿದೆ. ಅನಗತ್ಯವಾದ ಹಾಗೂ ಹುರುಳಿಲ್ಲದ ಪ್ರಕರಣಗಳು ನಮ್ಮ ನ್ಯಾಯಾಲಯಗಳ ಪಾಲಿಗೆ ಹೊರೆಯಾಗಿ ಪರಿಣಮಿಸುತ್ತಿವೆ. ಗಂಭೀರ ಪ್ರಕರಣಗಳ ವಿಚಾರಣೆ ಕೂಡ ನಿಧಾನವಾಗಿ ಸಾಗುವಂತೆ ಆಗುತ್ತದೆ ಎಂಬುದು ನಿಜಕ್ಕೂ ಕಳವಳಕಾರಿ ಸಂಗತಿ.


ಈಶ್ವರ್

ನ್ಯಾಯಾಲಯಗಳಲ್ಲಿ ಪ್ರಕರಣಗಳ ವಿಲೇವಾರಿ ತ್ವರಿತವಾಗಿ ಆಗುತ್ತಿಲ್ಲ ಎನ್ನುವ ವಿಷಯ ಪದೇ ಪದೇ ಚರ್ಚೆಗೆ ಒಳಪಡುತ್ತಲೇ ಇದೆ. 'ನ್ಯಾಯದಾನ ಪ್ರಕ್ರಿಯೆಯಲ್ಲಿ ಅತಿಯಾದ ವಿಳಂಬವು ನ್ಯಾಯವನ್ನೇ ನಿರಾಕರಿಸುವುದಕ್ಕೆ ಸಮ' ಎಂಬ ಮಾತನ್ನು ನ್ಯಾಯಾಂಗದ ಹಿರಿಯರು ಸಂದರ್ಭೋಚಿತವಾಗಿ ನೆನಪಿಸುತ್ತಲೇ ಇರುತ್ತಾರೆ. ನ್ಯಾಯದಾನ ವಿಳಂಬದಿಂದಾಗಿ ಜನ ರೋಸಿಹೋಗಿದ್ದಾರೆ. ಕಾನೂನಿನ ಆಡಳಿತದ ಬಗ್ಗೆ ವಿಶ್ವಾಸ ಕಳೆದುಕೊಳ್ಳುತ್ತಿದ್ದಾರೆ ಎಂಬ ಎಚ್ಚರಿಕೆಯ ಮಾತು ಆಗಿಂದಾಗ್ಗೆ ಧ್ವನಿಸುತ್ತಲೇ ಇರುತ್ತದೆ. ಈ ಬಗೆಯ ವಿಳಂಬವು ಜನತಂತ್ರಕ್ಕೆ ಅಪಾಯಕಾರಿ ಎಂಬ ಮಾತನ್ನು ನಮ್ಮ ಅಧಿಕಾರಸ್ಥರು ಕೂಡ ಒಪ್ಪುತ್ತಾರೆ. ಆದರೆ ಸರಿಪಡಿಸುವ ಇಚ್ಛಾಶಕ್ತಿ ಮಾತ್ರ ವ್ಯಕ್ತವಾಗುತ್ತಲೇ ಇಲ್ಲ ಎಂಬುದು ದುರದೃಷ್ಟಕರ.

'ನ್ಯಾಯಾಂಗದ ಕರ್ತವ್ಯದ ಭಾರ ವಿಪರೀತ ಹೆಚ್ಚಿದೆ; ಅಗತ್ಯ ಸೌಕರ್ಯಗಳನ್ನು ಸರ್ಕಾರಗಳು ಕಲ್ಪಿಸದೆ ಇರುವುದೇ ಈ ಸ್ಥಿತಿಗೆ ಕಾರಣ. ಪ್ರಕರಣಗಳ ವಿಳಂಬದ ಇಡೀ ಹೊಣೆಯನ್ನು ನ್ಯಾಯಾಂಗದ ತಲೆಗಷ್ಟೇ ಕಟ್ಟಬೇಡಿ' ಎಂದು ಟಿ.ಎಸ್. ಠಾಕೂರ್ ಅವರು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿದ್ದಾಗ ಸಮಾವೇಶವೊಂದರಲ್ಲಿ ಹೇಳಿದ್ದರು. ತ್ವರಿತ ನ್ಯಾಯದಾನಕ್ಕೆ ಬೇಕಾದ ಸೌಕರ್ಯ ಒದಗಿಸುವುದು ಒಂದು ಆಯಾಮ. ಆ ಜವಾಬ್ದಾರಿಯನ್ನು ಸರ್ಕಾರ ಸರಿಯಾಗಿ ನಿಭಾಯಿಸಿದ್ದರೆ ಇವತ್ತು ನ್ಯಾಯಾಂಗದ ವಿವಿಧ ಹಂತಗಳಲ್ಲಿ ವಿಲೇವರಿಯಾಗದೆ ಕೊಳೆಯುತ್ತಿರುವ ಪ್ರಕರಣಗಳ ರಾಶಿ ಈ ಮಟ್ಟಕ್ಕೆ ಏರುತ್ತಿರಲಿಲ್ಲ ಎಂಬುದರಲ್ಲಿ ಯಾವ ಅನುಮಾನವೂ ಇಲ್ಲ.

ವಿಳಂಬಕ್ಕೆ ಕಾರಣವಾದ ಒಂದು ಪ್ರಧಾನ ಅಂಶವನ್ನು ಮತ್ತು ಅದನ್ನು ನಿವಾರಿಸುವಲ್ಲಿ ಸರ್ಕಾರ ವಿಫಲವಾಗಿರುವುದನ್ನು ನ್ಯಾಯಮೂರ್ತಿ ಠಾಕೂರ್ ಅವರು ಎತ್ತಿ ತೋರಿಸಿದ್ದರು. ನ್ಯಾಯಮೂರ್ತಿ ಎನ್. ವಿ. ರಮಣ ಅವರು ಇದರ ಇನ್ನೊಂದು ಮಗ್ಗುಲನ್ನು ತಾವು ಸಿಜೆಐ ಆಗಿದ್ದ ಅವಧಿಯಲ್ಲೇ ತೆರೆದಿಟ್ಟಿದ್ದರು. ನ್ಯಾಯಾಲಯಗಳಲ್ಲಿ ವಿಚಾರಣೆಯ ಹಂತದಲ್ಲಿ ಬಾಕಿ ಇರುವ ಒಟ್ಟು ಪ್ರಕರಣಗಳ ಪೈಕಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ವಾದಿ ಅಥವಾ ಪ್ರತಿವಾದಿ ಆಗಿರುವ ಪ್ರಕರಣಗಳ ಪಾಲು ಸರಿಸುಮಾರು ಶೇ. 50ರಷ್ಟು ಇದೆ. ಸರ್ಕಾರದ ಎಲ್ಲ ಅಂಗಗಳು ತಮ್ಮ ಪಾಲಿನ ಕೆಲಸವನ್ನು ಸರಿಯಾಗಿ ಮಾಡಿದ್ದಿದ್ದರೆ ನ್ಯಾಯಾಲಯಗಳು ವಿಚಾರಣೆ ನಡೆಸಬೇಕಾದ ಪ್ರಕರಣಗಳ ಸಂಖ್ಯೆ ಕಡಿಮೆ ಇರುತ್ತಿತ್ತು. ಅಲ್ಲದೆ, ನೀತಿ ನಿರೂಪಣೆಗೆ ಸಂಬಂಧಿಸಿದ ವಿಚಾರಗಳಲ್ಲಿ ತೀರ್ಮಾನ ನೀಡಬೇಕಾದ ಪ್ರಮೇಯ ಎದುರಾಗುತ್ತಿರಲಿಲ್ಲ ಎಂದು ಹೇಳುವ ಮೂಲಕ ರಮಣ ಅವರು ನಮ್ಮ ಆಡಳಿತ ವ್ಯವಸ್ಥೆಯ ನ್ಯೂನತೆಗಳಿಗೆ ಕನ್ನಡಿ ಹಿಡಿದಿದ್ದರು.

'ಅಕ್ರಮ' ಬಂಧನಗಳು, ಪೊಲೀಸರ ವಶದಲ್ಲಿ ಇದ್ದಾಗ ಆರೋಪಿಗಳಿಗೆ ಹಿಂಸೆ ನೀಡುವುದು, ಪೊಲೀಸರು ಪಕ್ಷಪಾತಿಯಾಗಿ ತನಿಖೆ ನಡೆಸುವುದರ ಬಗ್ಗೆಯೂ ಪ್ರಸ್ತಾಪಿಸಿದ್ದ ರಮಣ ಅವರು, ಇಂತಹ ಪ್ರಕರಣಗಳಲ್ಲಿ ಕೂಡ ಸಂತ್ರಸ್ತರು ನ್ಯಾಯಾಲಯದ ಬಾಗಿಲು ತಟ್ಟುತ್ತಾರೆ. ಸೇವಾ ಹಿರಿತನ, ಪಿಂಚಣಿ ನೀಡುವುದಕ್ಕೆ ಸಂಬಂಧಿಸಿದ ಪ್ರಕರಣಗಳಲ್ಲಿ ಸೇವಾ ನಿಯಮಗಳನ್ನು ಸರಿಯಾಗಿ ಅನ್ವಯ ಮಾಡಿದರೆ ಯಾರೂ ಕೋರ್ಟ್ ಮೆಟ್ಟಿಲೇರಬೇಕಾದ ಪರಿಸ್ಥಿತಿಯೇ ಸೃಷ್ಟಿಯಾಗುವುದಿಲ್ಲ ಎಂದು ಅವರು ಹೇಳಿದ್ದರು. ಅಂದರೆ ನೀತಿ–ನಿಯಮ ರೂಪಿಸುವಲ್ಲಿ ಮತ್ತು ಅದರ ಅನುಷ್ಠಾನದಲ್ಲಿ ಆಗುತ್ತಿರುವ ಲೋಪಗಳಿಂದಾಗಿಯೂ ಕೋರ್ಟ್ ಮೆಟ್ಟಿಲೇರುವ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿದೆ. ಆದಕಾರಣ, ನ್ಯಾಯದಾನ ವಿಳಂಬಕ್ಕೆ ನ್ಯಾಯಾಲಯಗಳು ಮಾತ್ರ ಕಾರಣ ಎಂದು ಆರೋಪಿಸುವುದರಲ್ಲಿ ಅರ್ಥವಿಲ್ಲ.

ಸುಪ್ರೀಂ ಕೋರ್ಟ್ ಈಗ ಇನ್ನೊಂದು ಮುಖ್ಯ ಅಂಶವನ್ನೂ ಎತ್ತಿತೋರಿಸಿದೆ. ಸರ್ಕಾರಗಳು ಅನಗತ್ಯವಾಗಿ ಕೋರ್ಟ್ ಪ್ರಕರಣಗಳಲ್ಲಿ ತೊಡಗಿಸಿಕೊಂಡಿವೆ. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ದಾಖಲು ಮಾಡಿರುವ ಪ್ರಕರಣಗಳ ಪೈಕಿ ಶೇ. 40ರಷ್ಟು ಪ್ರಕರಣಗಳು ಹುರುಳಿಲ್ಲದವು ಎಂದು ಕೋರ್ಟ್ ಈಚೆಗೆ ಹೇಳಿರುವುದು ಗಮನಾರ್ಹ. ನಗರ ಸ್ಥಳೀಯ ಸಂಸ್ಥೆಗಳು, ಸರ್ಕಾರಿ ಸ್ವಾಮ್ಯದ ಕಂಪನಿಗಳು ಹಾಗೂ ಸಂಸ್ಥೆಗಳು ದಾಖಲು ಮಾಡಿರುವ ಪ್ರಕರಣಗಳನ್ನು ಪರಿಗಣನೆಗೆ ತೆಗೆದುಕೊಂಡರೆ ಈ ಸಂಖ್ಯೆ ಇನ್ನಷ್ಟು ಹೆಚ್ಚಬಹುದು ಎಂದೂ ಕೋರ್ಟ್ ಹೇಳಿದೆ. ಅನಗತ್ಯವಾದ ಹಾಗೂ ಹುರುಳಿಲ್ಲದ ಪ್ರಕರಣಗಳು ನಮ್ಮ ನ್ಯಾಯಾಲಯಗಳ ಪಾಲಿಗೆ ಹೊರೆಯಾಗಿ ಪರಿಣಮಿಸುತ್ತಿವೆ. ಅಷ್ಟೇ ಅಲ್ಲ, ಗಂಭೀರ ಪ್ರಕರಣಗಳ ವಿಚಾರಣೆ ಕೂಡ ನಿಧಾನವಾಗಿ ಸಾಗುವಂತೆ ಆಗುತ್ತದೆ ಎಂಬುದು ನಿಜಕ್ಕೂ ಕಳವಳಕಾರಿ ಸಂಗತಿ.

ಸರ್ಕಾರದ ನಡುವಿನ ಕಾನೂನು ತೊಡಕುಗಳನ್ನು ಮಧ್ಯಸ್ಥಿಕೆಯ ಮೂಲಕ ಬಗೆಹರಿಸಿಕೊಳ್ಳುವುದು ಒಳ್ಳೆಯದು ಎಂದು ಈಗಿನ ಸಿಜೆಐ ಡಿ.ವೈ. ಚಂದ್ರಚೂಡ್ ಅವರು ಈಚೆಗೆ ಕೇಂದ್ರ ಸರ್ಕಾರಕ್ಕೆ ಹೇಳಿದ್ದರು. ಈ ಕಿವಿಮಾತನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ಆ ಮೂಲಕ ಆಡಳಿತದ ಮೇಲೆ ಆಗುವ ಕೆಟ್ಟ ಪರಿಣಾಮವನ್ನು ತಪ್ಪಿಸಬೇಕು. ಅನಗತ್ಯ ಅನ್ನಿಸುವಂತಹ ಪ್ರಕರಣಗಳನ್ನು ಹಿಂದಕ್ಕೆ ಪಡೆಯುವುದಲ್ಲದೆ, ಕೆಲವು ಪ್ರಕರಣಗಳನ್ನು ಮಧ್ಯಸ್ಥಿಕೆ ಮೂಲಕ ಬಗೆಹರಿಸಿಕೊಳ್ಳುವ ದಿಸೆಯಲ್ಲಿ ದೃಢ ಹೆಜ್ಜೆ ಇಡಬೇಕು.

■ ಎನ್. ಉದಯಕುಮಾರ್